# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **25 (153)** |
| 2. ಸದಸ್ಯರ ಹೆಸರು | : | ಶ್ರೀ ಎನ್.ಎಸ್. ಭೋಸ್ ರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸುವ ದಿನಾಂಕ | : | **03.03.2020** |
| 4. ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಯಚೂರಿನಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ನಿರ್ಮಾಣ ಮಾಡಿರುವ ವಸತಿ ಗೃಹಗಳನ್ನು ಹಂಚಿಕೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಈ ವಸತಿ ಗೃಹಗಳ ನಿರ್ಮಾಣಕ್ಕೆ ಖರ್ಚು ಮಾಡಿರುವ ಅನುದಾನ ಎಷ್ಟು; | ರಾಯಚೂರಿನಲ್ಲಿ ಕೆಐಎಡಿಬಿ ವತಿಯಿಂದ ರಾಯಚೂರು ಕೈಗಾರಿಕಾ ಪ್ರದೇಶವನ್ನು 155-88 ಎಕರೆ, ರಾಯಚೂರು ಬೆಳವಣಿಗೆ ಕೇಂದ್ರ ಕೈಗಾರಿಕಾ ಪ್ರದೇಶವನ್ನು 1745-31 ಎಕರೆ, ದೇವಸುಗೂರು ಕೈಗಾರಿಕಾ ಪ್ರದೇಶವನ್ನು 214-86 ಎಕರೆ ಮತ್ತು ಯರ್‌ಮರಸ್ ಕೈಗಾರಿಕಾ ಪ್ರದೇಶವನ್ನು 41-62 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗಿದೆ.<br><br>ಸದರಿ ಕೈಗಾರಿಕಾ ಪ್ರದೇಶದಲ್ಲಿರುವ ಕೈಗಾರಿಕೆಗಳಿಗೆ ಹಾಗೂ ಅದರಲ್ಲಿ ಕೆಲಸ ಮಾಡುವವರಿಗೆ ರಾಯಚೂರು ತಾಲ್ಲೂಕಿನ ಮೋತಗಲ್ ಮತ್ತು ಯರಮರಸ್ ಗ್ರಾಮದ 253-32 ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ನಿರ್ಮಿಸಲಾಗಿರುತ್ತದೆ. ವಸತಿ ಬಡಾವಣೆಯಲ್ಲಿ ನಿರ್ಮಿಸಿರುವ ವಸತಿ ಗೃಹಗಳಿಗಾಗಿ ಮಾತ್ರ ಒಟ್ಟು ರೂ.45.73 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.<br><br>ದಿನಾಂಕ 16.07.2016ರಂದು ನಡೆದ ಕೆ.ಐ.ಎ.ಡಿ.ಬಿ.ಯ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ ಈ ಕೆಳಕಂಡ ಪ್ರಮುಖ ಅಂಶಗಳನ್ವಯ ವಸತಿ ಗೃಹಗಳನ್ನು ವಿಲೇವಾರಿ ಮಾಡಲು ತೀರ್ಮಾನಿಸಲಾಗಿದೆ:<br><br>➢ To invite applications for allotment of housing sites/tenements by issuing advertisement in newspapers;<br>➢ The applicant should be an allottee/industrial worker in the KIADB Industrial Area;<br>➢ The applicant shall seek allotment of housing sites/tenements in that particular industrial area where the unit is established or employed in the unit functioning in the said industrial area;<br>➢ The applicant should not own housing sites/tenements in any of the KIADB Industrial Area;<br>➢ **Category of Reservation:**<br>a) 70% of the housing sites/tenements/houses shall be allotted to major industrial houses/Govt., Organizations like Karnataka Housing Board, KPCL, KPTCL, ESCOMS etc.;<br>b) 25% of the housing sites/tenements/houses shall be allotted to the industrial workers working in industries in that particular industrial area including reserved categories;<br>c) 5% of the housing sites/tenements/houses shall be reserved for future allotment by way of auction after lapse of minimum period of three years from the date of completion of the project. |

| | | |
|---|---|---|
| | | ಮೇಲ್ಕಂಡ ನಿರ್ಣಯಗಳನ್ವಯ ಈ ವಸತಿ ಗೃಹಗಳನ್ನು ಕೆ.ಐ.ಎ.ಡಿ.ಬಿ.ಯು ಕೆ.ಪಿ.ಸಿ.ಎಲ್. ಸಂಸ್ಥೆಗೆ ನೀಡುವ ಬಗ್ಗೆ ಸದರಿ ಸಂಸ್ಥೆಯೊಡನೆ ಪತ್ರ ವ್ಯವಹಾರಗಳನ್ನು ಮಾಡಲಾಗಿದ್ದು, ಕೆ.ಪಿ.ಸಿ.ಎಲ್. ಸಂಸ್ಥೆಯು ವಸತಿ ಗೃಹಗಳನ್ನು ಪಡೆಯದೇ ಇದ್ದುದರಿಂದ, ಪರ್ಯಾಯ ಮಾರ್ಗವಾಗಿ ದಿನಾಂಕ 08.08.2019ರಂದು ವಿವಿಧ ದಿನಪತ್ರಿಕೆಗಳಲ್ಲಿ ಜಾಹೀರಾತನ್ನು ನೀಡಲಾಗಿದ್ದು, ಈ ಜಾಹೀರಾತುಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದಿಲ್ಲ.<br><br>ದಿನಾಂಕ 18.12.2019ರಂದು ಅಂದಾಜು ಸಮಿತಿಯು ಸದರಿ ವಸತಿ ಬಡಾವಣೆಗೆ ಭೇಟಿ ನೀಡಿ ಪರಿಶೀಲಿಸಿದ್ದು, ಮೇಲೆ ತಿಳಿಸಿರುವ ಷರತ್ತುಗಳನ್ವಯ ನಿವೇಶನ/ಗೃಹಗಳ ಬೇಡಿಕೆಗೆ ಪ್ರತಿಕ್ರಿಯೆ ಬಾರದಿರುವುದರಿಂದ, ಇವುಗಳನ್ನು ಸಾರ್ವಜನಿಕರಿಗೆ, ಸರ್ಕಾರಿ ನೌಕರರಿಗೆ ಹಾಗೂ ಇತರರಿಗೂ ಸಹ ಹಂಚಿಕೆ ಮಾಡುವಂತೆ ನಿರ್ದೇಶನ ನೀಡಿರುತ್ತದೆ.<br><br>ದಿನಾಂಕ: 24.02.2020ರಂದು ನಡೆದ ಕೆ.ಐ.ಎ.ಡಿ.ಬಿ.ಯ ಮಂಡಳಿ ಸಭೆಯಲ್ಲಿ ವಸತಿ ಗೃಹಗಳು ಮತ್ತು ನಿವೇಶನಗಳನ್ನು ಸಾರ್ವಜನಿಕರಿಗೆ, ಸರ್ಕಾರಿ ನೌಕರರಿಗೆ ಹಾಗೂ ಇತರರಿಗೂ ಹಂಚಿಕೆ ಮಾಡಲು ತೀರ್ಮಾನಿಸಲಾಗಿದ್ದು, ಅದರಂತೆ ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುವುದು. |
| ಆ. | ರಾಯಚೂರು ನಗರದಲ್ಲಿ ಬೃಹತ್ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ➢ ಉತ್ತರ ಕರ್ನಾಟಕದಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ದಿನಾಂಕ: 14.02.2020ರಂದು ಹುಬ್ಬಳ್ಳಿಯಲ್ಲಿ ಇನ್‌ವೆಸ್ಟ್ ಕರ್ನಾಟಕ ಸಮಾವೇಶ ನಡೆಸಲಾಗಿದೆ.<br><br>➢ ದಿನಾಂಕ 03-05, ನವೆಂಬರ್ 2020ರಂದು ಬೆಂಗಳೂರಿನಲ್ಲಿ ಇನ್ವೆಸ್ಟ್ ಕರ್ನಾಟಕ-2020, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಲು ಉದ್ದೇಶಿಸಲಾಗಿದೆ.<br><br>➢ ಕೈಗಾರಿಕೆಗಳ ಸ್ಥಾಪನೆ ಪ್ರೋತ್ಸಾಹಿಸಲು ಹಾಲಿ ಇರುವ ಕೈಗಾರಿಕಾ ನೀತಿ 2014-19, ಕೃಷಿ ವಾಣಿಜ್ಯ ಮತ್ತು ಆಹಾರ ಸಂಸ್ಕರಣಾ ನೀತಿ 2015ರನ್ವಯ ವಿವಿಧ ಪ್ರೋತ್ಸಾಹಕ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ.<br><br>➢ ಕೈಗಾರಿಕೆಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲು ಹೊಸ ಕೈಗಾರಿಕಾ ನೀತಿ 2019-24ನ್ನು ಜಾರಿಗೆ ತರಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಸಿಐ 23 ಐಎಪಿ(ಇ) 2020**

**(ಜಗದೀಶ್ ಶೆಟ್ಟರ್)**
**ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ,**
**ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು**